

ಅನೇಕ ಗುಟ್ಟುಗಳು, ಚಾಡಿಮಾತುಗಳು, ಅವುಗಳಿಂದ ಉಂಟಾದ ಅತ್ತೆ-ಸೊಸೆ, ಗಂಡ-ಹೆಂಡತಿ, ಅಪ್ಪ-ಮಗ... ಅಕ್ಕ-ಪಕ್ಕದ ಮನೆಯ ಹೆಂಗಸರ ನಡುವೆ ಉಂಟಾದ ಜಗಳಗಳು, ಕೆಟ್ಟ ಬೈಗುಳಗಳು ಏನೆಲ್ಲ ಮೇಲೆದ್ದು ಬಂದಂತೆ ಅನಿಸಿ ಅವರು ಪಾತಾಳಗಡಗಕ್ಕೆ ಹೆದರುತ್ತಾರೆ.

ದುಡ್ಡು ಹೆಚ್ಚಾದಂತೆಲ್ಲ, ಮನೆಯಲ್ಲಿ ದಾನ ಧರ್ಮಗಳು, ಹೋಮಹವನಗಳು ಹೆಚ್ಚಾದವು. ಬಡವರಿಗೆ ಅನ್ನದಾನ, ವಸ್ತ್ರದಾನಗಳು, ಬಡ ವಿದ್ಯಾರ್ಥಿಗಳಿಗೆ ಬಟ್ಟೆ, ಪುಸ್ತಕಗಳ ದಾನ, ರೋಗಿಗಳಿಗಂತೂ ಶನಿವಾರ ಅಂದರೆ ಮನೆದೇವರ ವಾರ- ದೊಡ್ಡ ಆಸ್ಪತ್ರೆಯಲ್ಲಿ ಹಣ್ಣಿನ ದಾನ ಸಹ ನಡೆಯಿತು.

* * *

ಈಗ ಆ ಕುರ್ಚಿ ಎಂಬುದೊಂದು ಕುರ್ಚಿಯಾಗಿ ಕಾಣಿಸದೇ ಅದು ಭಗವಂತರಾಯರ ಆಪ್ತ ಸಖನಾಯಿತು. ಹೇಳಿದ್ದನ್ನೆಲ್ಲ ಕೇಳುವ ಸಹೃದಯಿಯಾಯಿತು. ಹೊಟ್ಟೆಗೆ ಹಾಕಿಕೊಂಡು ಪೊರೆವ ತಾಯಿಯಾಯಿತು. ಒಂದು ಧೈರ್ಯದ ಸಮಬಲವಾಗಿ ಬೇಕಾದ್ದಾಗಲಿ ನಾನಿದ್ದೇನೆ ಎಂದು ಧೈರ್ಯ ತುಂಬಿತು. ಈ ಧೈರ್ಯವೇ ಸುಳ್ಳನ್ನ ನಿಜವಾಗಿ ಹೊಳೆಸಿತು. ಚಾಡಿಗಳಿಗೆ, ಗುಟ್ಟುಗಳಿಗೆ ಬಲ ನೀಡಿ ಮತ್ತು ಮತ್ತು ಪ್ರೋತ್ಸಾಹಿಸಿ ಮನೆಗಳನ್ನ ಭಾಗವಾಗಿಸಿ, ಹಸಿದ ಹೊಟ್ಟೆಗಳಿಗೆ ಬೆಂಕಿ ಇಕ್ಕಿ ಸಿಕ್ಕ ಸಿಕ್ಕವರನ್ನೆಲ್ಲ ಭಸ್ಮಮಾಡತೊಡಗಿತು. ಆ ಉರಿ, ಆ ಧಗೆ, ತಾಪಗಳು, ಹೀಯಾಳಿಕೆ, ಅವಮಾನಗಳು ಆ ಪಾಪಿಗಳ, ಪಾಪದವರ ನಿಟ್ಟುಸಿರೆಲ್ಲ ಇವರ ಒಳಗೆ ಸೇರಿಕೊಂಡು ಬೇಯುತ್ತಾ ಹುರಿದ ಕಾಳಾಗಿ ಚಟಪಟ ಗುಟ್ಟುತ್ತ ಸಿಡಿಯತೊಡಗಿದಾಗ ಭಗವಂತರಾಯರು ನಾಲಿಗೆಯೊಣಗಿ ನೀರು ಕುಡಿಯಲು ಹಾತೊರೆದರು. ಅಲ್ಲೇ ಇದ್ದ ಗಣಪತಿ ಗೂಡಿಗೆ ಕೈ ಹಾಕಿದರು. ಆ ಗೂಡಿನಲ್ಲಿ ಅನೇಕ ವರ್ಷಗಳನ್ನ ಕಳೆದು ಕಿಲುಬು ಹಿಡಿದ ತಲೆಕೆಳಗಾಗಿ ಬಿದ್ದ ಅನೇಕ ಗಂಗೆ ಥಾಲಿನಗಳನ್ನ ನೋಡಿದರೆ ಎಲ್ಲವೂ ತೂತಾಗಿ, ಬಾಯಿ ಕಳೆದುಕೊಂಡು, ಕಂಠ ಒಡೆಸಿಕೊಂಡು, ಬರೀ ಬಕ್ಕಲಾಗಿ ಬಿದ್ದಿದ್ದವು. ಇವರು ಒಂದು ಥಾಲಿಯ